# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 94/2023

ಪ್ರ.ವ.ಬೋ. ದಿನಾಂಕ - 07-01-2026

| | | | |
|---|---|---|---|
| ಸಾಕ್ಷಿದಾರರ ಹೆಸರು | - ಶಿವರಾಜ | ಫ್ರಾ.ಸಾ. | - 02 |
| ಗಂಡನ ಹೆಸರು | - ರಂಗಪ್ಪ | ಚಾ.ಸಾ. | - 02 |
| ವಯಸ್ಸು | - 33 ವರ್ಷ | | |
| ಉದ್ಯೋಗ | - ಡ್ರೈವರ್ | | |
| ವಾಸ ಸ್ಥಳ | - ಬಿ ದುರ್ಗ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ಸಾಕ್ಷಿಗೆ ನಿಪಿ:2 ಮಹಜರನ್ನು ತೋರಿಸಿದ್ದು ಅದರಲ್ಲಿರುವ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ಎರಡೂವರೆ ವರ್ಷಗಳ ಹಿಂದೆ ಮಾಡಿರುತ್ತೇನೆ. ಸದರಿ ಸಹಿಯನ್ನು ಯಾವ ವಿಚಾರಕ್ಕೆ ಮಾಡಿದ್ದೇನೆ ಎಂದು ಗೊತ್ತಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**- ಪಾಟೀ ಸವಾಲು - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

ದಿನಾಂಕ 25.9.2022 ರಂದು ಪೋಲಿಸರು ನಮ್ಮೂರಿನ ಶಾಲೆಯ ಹತ್ತಿರ ಬಂದು ಆರೋಪಿ ಮತ್ತು ಚಾಸಾ:1, 7 ರವರ ನಡುವೆ ಆದ ಗಲಾಟೆಯಾದ ಸ್ಥಳದಲ್ಲಿ ನಿಪಿ:2 ರಂತೆ ಮಹಜರ ಮಾಡಿ ನಿಪಿ:3, 4 ರಂತೆ ಫೋಟೊ ತೆಗೆದು ಸೀರೆ, ಜಾಕೀಟು, ಕಲ್ಲನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**- ಪಾಟೀ ಸವಾಲು - ಆರೋಪಿಯ ಪರವಾಗಿ - ವಕೀಲರಿಂದ -**

**ಇಲ್ಲ ಎನ್ನುತ್ತಾರೆ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.